ಬಂದದ್ದು ನೆನಪಾಯ್ತು' ಎಂದು ಬಚಾವಾಗುತ್ತಿದ್ದ.

ಇವರು ಬಚ್ಚನಿಗೆ ಓಂಕಾರದುಚ್ಚಾರ ಹೇಳಿಕೊಡಲು ಆರಂಭಿಸಿದ ಮೊದಲ ದಿನಗಳಲ್ಲಿ ಈ ಶಬ್ದ ಸಂಭ್ರಮವನ್ನು ವೀಕ್ಷಿಸಲು ಸುತ್ತಮುತ್ತಲ ಮಕ್ಕಳೆಲ್ಲ ಸೇರುತ್ತಿದ್ದರು. ಒಮ್ಮೆ ಬಚ್ಚನ ಉಚ್ಚಾರಕ್ಕೆ ಗೊಳ್ಳೆಂದು ನಕ್ಕಾಗ ಪ್ರಕಾಶರು ಅವರನ್ನು ಬೈದು ಓಡಿಸಿದ್ದರು.

ಆತ್ಮ ಮತ್ತು ಪರಮಾತ್ಮ ಎರಡೂ ಒಂದೆಯೂ ಹೌದು, ಎರಡೂ ಬೇರೆ ಬೇರೆಯೂ ಹೌದು ಎಂದು ತಾವು ಕೇಳಿದ ದ್ವೈತಾದ್ವೈತ ಮಿತ್ರತತ್ವ ಪ್ರವಚನ ಫಲವನ್ನು ಬಚ್ಚನಿಗೆ ಬೋಧಿಸಲು ಪ್ರಕಾಶರಾಜರು ಅಂದು ಒದ್ದಾಡುತ್ತಿದ್ದರು.

'ದೇವ್ರು, ಅಂದ್ರೆ ದೈಯ್ಯ ಅನ್ನೂದಾದ್ರೆ, ಎಲ್ಲ ದೈಯ್ಯ ಒಂದೇ ಆಗ್ತದಾ?' ಎಂಬ ಬಚ್ಚನ ಶುದ್ಧ ಅವಿವೇಕಿ ಪ್ರಶ್ನೆ ಅವರ ಬೋಧನೆಗೇ ಸವಾಲಾದಂತಾಯ್ತು. ಇದನ್ನು ಪರಿಹರಿಸಿಕೊಳ್ಳಲು ಪ್ರಕಾಶರು ಕಂಡು ಕೊಂಡದ್ದೇ ಇಂಬತತ್ವ ಅಥವಾ ಇಂಬಾಧ್ಯಾತ್ಮ.

ಇಂಬ ಇಡಿಯಾಗಿ ಒಂದು ಹಣ್ಣು. ಅದರ ತೊಳೆಗಳೆಲ್ಲ ಬೇರೆ ಬೇರೆಯೇ. ಆದರೂ ಕೈಯಿಂದ ಬೇರ್ಪಡಿಸುವುದು ಸುಲಭವಲ್ಲ. ಎಲ್ಲವೂ ಒಂದಕ್ಕೊಂದು ಅಂಟಿಕೊಂಡು ಅವನ್ನು ಬೇರ್ಪಡಿಸಲಾಗದಷ್ಟು ಬಿಗಿ ಬಂಧದಿಂದ ಕೂಡಿರುತ್ತವೆ. ಅದನ್ನೇನಾದರೂ ಬೇರ್ಪಡಿಸುವುದಕ್ಕೆ ಅಂತ ನಾವು ಕೈ ಹಾಕಿದರೆ ಅದರ ಮೇಣ ಕೈಗಂಟುವುದು ನಿಶ್ಚಿತ. ಅವು ಒಂದಕ್ಕೊಂದು ಅಂಟಿಕೊಂಡಿವೆ ಎಂಬುದು ತಿಳಿದೂ ನಾವು ಬೇರ್ಪಡಿಸಲು ಹೊಗುತ್ತೇವೆ. ತೊಳೆಗಳೆಲ್ಲ ಬೇರೆ ಬೇರೆ ಎಂತ ಗೊತ್ತಿದ್ದೂ ನಾವು ಒಟ್ಟಿಗೆ ಒಂದು ಹಣ್ಣು, ಹಲಸಿನ ಹಣ್ಣು ಅಂತ ಏಕವಚನ ಪ್ರಯೋಗ ಮಾಡುತ್ತೇವೆ. ಇದರ ಅರ್ಥ ಏನು? ಇಡಿ ಹಣ್ಣು ಪರಮಾತ್ಮನಾದರೆ, ತೊಳೆಗಳು ಆತ್ಮಗಳಿದ್ದಂತೆ ಇದು ಅರ್ಥವಾದರೆ ಅದ್ವೈತವೂ ಅರ್ಥವಾಗುತ್ತದೆ, ಅಧ್ಯಾತ್ಮವೂ ಅರ್ಥವಾಗುತ್ತದೆ, ಆತ್ಮಗಳ ಬಹುತ್ವವೂ ಅರ್ಥವಾಗುತ್ತದೆ ಏಕತ್ವವೂ ಅರ್ಥವಾಗುತ್ತದೆ ಎಂಬುದು ಪ್ರಕಾಶರ ಇಂಬತನ ತತ್ವಶಾಸ್ತ್ರದ ಸಾರ.

'ನಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳ ಬಂಧನಕ್ಕೆ ಸಿಕ್ಕಿ ಒದ್ದಾಡುತ್ತಿರುತ್ತೇವೆ. ಹಲಸಿನ ಹಣ್ಣಿನ ಮೇಣದ ಮೇಲೆ ಒಂದು ನೊಣ ಕೂತರೆ ಏನಾಗುತ್ತದೆ? ಅದು ಬಂದಿರುವುದು ಹಣ್ಣಿನ ಸಿಹಿ ತಿನ್ನಬೇಕು ಎಂಬ ಆಶೆಯಿಂದ. ಆದರೆ ಯಾವುದು ಸಿಹಿ ಅಂತ ಕಾಣುತ್ತದೋ ಅದೇ ನಮಗೆ ಬಂಧನವಾಗುತ್ತದೆ. ನೊಣದ ಕಾಲಿಗೆ ಮೇಣ ಅಂಟಿಕೊಂಡಂತೆ... ಹಾಗಾಗಿ ನಾವು ಸಾಧ್ಯವಾದಷ್ಟೂ ಲೌಕಿಕದ ಆಸೆಯಿಂದ ಅರ್ಥಾತ್ ಸಿಹಿತಿಂಡಿಗಳ ಮೋಹದಿಂದ ದೂರವೇ ಇರಬೇಕು...' ಎಂದು ಬಚ್ಚನೆದುರು ಉಪದೇಶದ ಪ್ರವಚನ ನೀಡುತ್ತಿದ್ದರು.

'ಅದು ಸಿಹಿಮೂತ್ರದವರಿಗೆ ಹೌದು; ನಾವು ಯಾಕೆ ಬಿಡಬೇಕು?' ಅಂತ ಬಚ್ಚ ಪ್ರತಿಕ್ರಿಯಿಸಿದ. ಈ ಬ್ರಹ್ಮಜ್ಞಾನ ಬ್ರಹ್ಮಸೃಷ್ಟಿಯ ಒಂದು ಭಾಗವೇ ಆದರೂ ಬ್ರಹ್ಮ ಇಂಥ ಅವಿವೇಕಿಗಳನ್ನೂ ಅಜ್ಞಾನಿಗಳನ್ನೂ ಯಾಕಾದರೂ ಸೃಷ್ಟಿಮಾಡುತ್ತಾನೆ? ಎಂಬ ಅಧ್ಯಾತ್ಮಾತೀತ ಪ್ರಶ್ನೆ ಪ್ರಕಾಶರಾಜರನ್ನು ತೀವ್ರವಾಗಿ ಕಾಡಿತು.

ಇಂಥವರಿಗೆ ಆದಷ್ಟು ಸರಳವಾಗಿ ಹೇಳಬೇಕು. ಆದರೆ ಅದು ಸುಲಭದ ಮಾತಲ್ಲ ಅಂದುಕೊಳ್ಳುತ್ತ ಇಂಬದ ಉದಾಹರಣೆ ಮತ್ತೆ ಮತ್ತೆ ನೀಡತೊಡಗಿದರು.

'ನೋಡು ಬಚ್ಚ, ಇಡಿ ಇಂಬ ಅಂದ್ರೆ ಪರಮಾತ್ಮ. ನಾವೆಲ್ಲ ಅದಕ್ಕೆ ಅಂಟಿಕೊಂಡ ತೊಳೆಗಳು. ಅದನ್ನು ಬಿಡಿಸುವುದು ಸುಲಭದ ಮಾತಲ್ಲ ಅದರ ಮೇಣ ಕೈಗೆಲ್ಲ ಅಂಟಿಕೊಳ್ಳುತ್ತದೆ. ಅದು ನಮ್ಮ ಕರ್ಮಬಂಧ. ಅದರಿಂದ ಬೇರೆ ಆದರೆ ಮೋಕ್ಷ. ತೊಳೆ ನಮ್ಮ ಬಾಯಿ ಸೇರಿದ ಹಾಗೆ.